ಓ ಎಸ್ ನಂ.56/2018 ಪಿ.ಡಬ್ಲ್ಯೂ 1

ಸಾಕ್ಷಿಯ ಹೆಸರುಃ ಎಸ್.ಆರ್. ಅಶ್ವಥ್

ದಿನಾಂಕ 02-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರತಿಜ್ಞಾಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯವೆಲ್ಲಾ ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದೆಂದು ಪ್ರಮಾಣಿಸಿ ಹೇಳಿರುತ್ತಾರೆ.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎ.ಎಸ್.ವಿ. ವಕೀಲರಿಂದಃ

1) ದಿನಾಂಕಃ30.07.2008 ರಂದು ದಾವಾಸ್ವತ್ತನ್ನು ನಾನು ಶ್ರೀಮತಿ ಸೌಭಾಗ್ಯಮ್ಮರವರಿಂದ ಕ್ರಯಕ್ಕೆ ಕೊಂಡಿದ್ದು ಸದರಿ ನೊಂದಾಯಿತ ಕ್ರಯಪತ್ರದ ಮೂಲಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ -01 ಎಂದು, ಸಾಕ್ಷಿ ನಿಪಿ-01

ರಲ್ಲಿನ ತಮ್ಮ ಹಾಗೂ ಸೌಭಾಗ್ಯಮ್ಮರವರ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 1(ಎ) ಮತ್ತು ನಿಪಿ -01(ಬಿ) ಎಂದು,

2) ದಾವಾಸ್ವತ್ತನ್ನು ಶ್ರೀಮತಿ ಸೌಭಾಗ್ಯಮ್ಮರವರಿಗೆ ಪುರಸಭಾ ಕಾರ್ಯಾಲಯ, ಕೃಷ್ಣರಾಜನಗರ ರವರು ನೀಡಿದ ಮನೆ ನಿವೇಶನದ ಸ್ವಾಧೀನ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-02 ಎಂದು,

3) ಪುರಸಭಾ ಕಾರ್ಯಾಲಯ, ಕೃಷ್ಣರಾಜನಗರ ಕ್ಕೆ ಸರ್ವೆ ನಂ.72 ರ ನಿವೇಶನದ ಬಾಬ್ತು ರೂ.12,450/- ಹಣವನ್ನು ಸಂದಾಯ ಮಾಡಿದ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು,

4) ದಾವಾಸ್ವತ್ತಿನ ಆಸ್ತಿ ತೆರಿಗೆಯ ರಿಜಿಸ್ಟರಿನ ಮೂರು ನಕಲು ಪ್ರತಿಗಳನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-04 ರಿಂದ ನಿಪಿ-06 ಎಂದು,

5) ದಾವಸ್ವತ್ತಿಗೆ ಸಂಬಂಧಿಸಿದ ಪುರಸಭೆ ಕಾರ್ಯಲಯ, ಕೆ ಆರ್ ನಗರದ ಮುಖ್ಯಾಧಿಕಾರಿಗಳು ನೀಡಿದ ಒಂದು ಸ್ಕೆಚ್ ಹಾಗೂ ಒಂದು ದೃಢೀಕರಣ ಪತ್ರವನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-07 ಮತ್ತು ನಿಪಿ-08 ಎಂದು,

6) ಒಂದು ತೆರಿಗೆ ರಶೀದಿ ಹಾಗೂ ಒಂದು ಇಸಿಯನ್ನು ಹಾಜರುಪಸಿಡಿದ್ದು ಅವುಗಳನ್ನು ನಿಪಿ-09 ಮತ್ತು ನಿಪಿ-10 ಎಂದು,

7) ದಾವಸ್ವತ್ತುಗಳಿಗೆ ಸಂಬಂಧಿಸಿದ 7 ಫೋಟೋಗಳು ಹಾಗೂ ಒಂದು ಸಿಡಿಯನ್ನು ಹಾಜರುಪಸಿಡಿದ್ದು ಅವುಗಳನ್ನು ನಿಪಿ-11 ರಿಂದ ನಿಪಿ-18 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಸಿ.ಡಿ.ಎಂ. ವಕೀಲರಿಂದಃ</u>

ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.